ಶ್ರೀ ಎಸ್. ಬಂಗಾರಪ್ಪ.-- ಎಲ್ಲರೂ ಸೇರಿ ಸುಮ್ಮನೆ ಕುಳಿತುಕೊಳ್ಳೋಣವೇ ? ನಾವೂ ನೀವು ಎಲ್ಲಾ ಸೇರಿ ಸರ್ಕಾರ ಕೊಡುವವರೆಗೆ ಸುಮ್ಮನೆ ಕುಳಿತುಕೊಳ್ಳೋಣವೇ

ಶ್ರೀ ಜಿ. ರಾಜುಗೌಡ.— ನನಗೂ ಹೇಳಿಕೆಯ ಪ್ರತಿ ಬಂದಿಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.-- ನನಗೆಗೂ ಹೇಳಿಕೆಯ ಪ್ರತಿ ಬಂದಿಲ್ಲ ?

ಅಧ್ಯಕ್ಷರು.-- ಮಾನ್ಯ ಜಿಗಜಿಣಗಿಯವರೇ, ಮಾನ್ಯ ಸದಸ್ಯರು ಏನು ವಿಷಯದ ಬಗ್ಗೆ ಗಮನ ಸೆಳೆಯುತ್ತಾರೆ ಆ ಬಗ್ಗೆ ತಪ್ಪು ಉತ್ತರದ ನಕಲು ಪ್ರತಿಯೇನು ಅವರಿಗೆ ಒದಗಿಸುವುದು ನಿಮ್ಮ ಕರ್ತವ್ಯ. ಅವರಿಗೆ ನಕಲು ಪ್ರತಿಗಳನ್ನು ಸರಬರಾಜು ಮಾಡಿ.

ಶ್ರೀ ರಮೇಶ್ ಜಿಗಜಿಣಗಿ.-- ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ. ಎಚ್ ಪಾಟೀಲ್.-- ಅಧ್ಯಕ್ಷರೇ, ಒಬ್ಬ ಮಂತ್ರಿಯವರು ಹೇಳಿದ್ದನ್ನು ಇನ್ನೊಬ್ಬ ಮಂತ್ರಿಯವರು ಹೇಳುತ್ತಾರೆ. ಯಾವುದೇ ಮಂತ್ರಿಯವರು ತೆಗೆದುಕೊಳ್ಳತಕ್ಕದ್ದನ್ನು ಮಾನ್ಯ ಲಕ್ಷ್ಮೀ ಸಾಗರ್ ಅವರು, ಎಂದರೆ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ತೆಗೆದುಕೊಳ್ಳುತ್ತಾರೆ. ಇವೊತ್ತು ಏನು ಸುಳ್ಳು ಜಾತಿ ಪ್ರಮಾಣ ಪತ್ರಗಳ ಬಗ್ಗೆ ಗಮನ ಸೆಳೆದಿದ್ದೇವೆ ಇದರ ಬಗ್ಗೆ ಸಂಬಂಧ ಪಟ್ಟ ಮಂತ್ರಿಗಳು ಇಲ್ಲದಿದ್ದರೆ ಬೇರೆಯವರು ಆ ಬಗ್ಗೆ ಉತ್ತರ ಕೊಡಲು ಏನು ಹಕ್ಕತ್ ಆಗುತ್ತದೆ ? Shall we delay the matter. Is it not really consuming lot of time of this House

ಅಧ್ಯಕ್ಷರು.--ಮಾನ್ಯ ಲಕ್ಷ್ಮೀಸಾಗರ್ ಅವರೇ, ನೀವು ಸಂಸದೀಯ ವ್ಯವಹಾರಗಳ ಖಾತೆಯನ್ನು ವಹಿಸಿಕೊಂಡಿದ್ದೀರಿ. ನೀವು ಎಲ್ಲಾ ಮಂತ್ರಿಗಳಿಗೆ ಇದನ್ನು ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.-- ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.
ಅಧ್ಯಕ್ಷರು.-- ನಾಳೆಯಿಂದ ಈ ರೀತಿ ಆಗಬಾರದು.

ನಿಯಮ ೩೭ರ ಕೆಳಗೆ ಚರ್ಚೆ

(i) ಅಫಜಲ್‌ಪುರ ತಾಲ್ಲೂಕು ಗಾಣಗಾಪುರದಲ್ಲಿ ಭೀಮಾನದಿಯ ಹತ್ತಿರ ಸ್ನಾನ ಘಟ್ಟಗಳನ್ನು ನಿರ್ಮಿಸುವುದು

ಶ್ರೀ ಮಾಲಿಕಯ್ಯ ವಿ ಗುತ್ತೇದಾರ್.-- ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕು ಗಾಣಗಾಪುರದಲ್ಲಿ ಭೀಮಾನದಿಯು ಸಮೀಪ ಇರುವ ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ಅಸಂಖ್ಯಾತ ಭಕ್ತಾದಿಗಳು ಎಲ್ಲಾ ಕಡೆಯಿಂದಲೂ ಬರುತ್ತಿದ್ದು ಅಲ್ಲಿ ಸ್ನಾನ ಘಟ್ಟವಿಲ್ಲದೆ ಭಕ್ತಾದಿಗಳ ರಕ್ಷಣೆಯಿಲ್ಲದ ಭೀಮಾನದಿಯಲ್ಲಿ ಸ್ನಾನ ಮಾಡಬೇಕಾಗಿದ್ದು ಅನೇಕ ದುರ್ಘಟನೆಗಳೂ ಹಿಂದೆ ಸಂಭವಿಸಿದೆ. ಹಿಂದಿನ ಸರಕಾರದವರು ಅಲ್ಲಿನ ಪಿದಾನದ ಧರ್ಮಶಾಲೆಯ ಎದುರಿನಲ್ಲಿ ಇಂದು ಸ್ನಾನ ಘಟ್ಟವನ್ನು ನಿರ್ಮಿಸುವ ಸಲುವಾಗಿ ಅಂದಾಜನ್ನು ತಯಾರಿಸುವ ಬಗ್ಗೆ ಆದೇಶ ನೀಡಿದ್ದರು. ಅಂತೆಯೇ ಅಂದಾಜು ತಯಾರಾಗಿ ಗುಲ್ಬರ್ಗಾ ಸೂಪರಿಂಟೆಂಡಿಂಗ್ ಇಂಜಿನಿಯರ್‌ರಲ್ಲಿ ಇತ್ಯರ್ಥವಾಗದೇ ಹಾಗೆಯೇ ಉಳಿದಿದೆ. ಭಕ್ತಾದಿಗಳ ತೊಂದರೆಯನ್ನು ನಿವಾರಿಸಲು ಹಾಗೂ ದುರ್ಘಟನೆಗಳಾಗದಂತೆ ತಡೆಗಟ್ಟಲು ಕೂಡಲೇ ಸದರಿ ಅಂದಾಜನ್ನು ಮಂಜೂರು ಮಾಡಿ ಸ್ನಾನ ಘಟ್ಟವನ್ನು ಕೂಡಲೇ ನಿರ್ಮಿಸುವ ಕ್ರಮ ಕೈಗೊಳ್ಳ ಬೇಕಾಗಿದೆ ಎಂದು ಸರ್ಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್ -- ನಾನು ಅವರಿಗೆ ಉತ್ತರವನ್ನು ಒದಗಿಸುತ್ತೇನೆ

(ii) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಜಮೀನನ್ನು ಅಕ್ರಮಣ ಮಾಡಿಕೊಂಡಿರುವುದನ್ನು ಸಕ್ರಮ ಮಾಡುವುದು.

ಶ್ರೀ ಕೆ. ಕುಶಾಲಪ್ಪ ಗೌಡ.- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಜಮೀನು, ಕುಮ್ಕಿ, ಫಾರೆಸ್ಟ್ ಫರ್ ಮುಂತಾದ ಜಮೀನುಗಳನ್ನು ೧೯-೫೦ನೇ ಇಸವಿಯಿಂದಲೂ, ಆಗ್ಗೆ ಮಾಡಿ ತೆಂಗು, ಅಡಿಕೆ, ಕೃಷಿ, ಬೆಳೆ, ಇನ್ನಿತರ ಕೃಷಿ ಮಾಡಿ ಜೀವಿಸಿಕೊಂಡು ಬರುತ್ತಿದ್ದಾರೆ. ಅಲ್ಲದೆ